◆ **ಹಾಸನದಂತಹ ಚಿಕ್ಕ ಊರಿನಲ್ಲಿ ಬೆಳೆದ ನೀವು ಶ್ರೀರಾಮ್ ಅವರನ್ನು ಮದುವೆಯಾದ ನಂತರ ಸಾಹಿತ್ಯಿಕವಾಗಿ, ಸಾಂಸ್ಕೃತಿಕವಾಗಿ ಭಿನ್ನವಾದ ಪರಿಸರವನ್ನು ಪ್ರವೇಶಿಸಿದಿರಿ. ಒಬ್ಬ ಹೊಸ ವ್ಯಕ್ತಿಯೇ ಆದ ನಿಮ್ಮ ಈ–ಆ ಬದುಕಿನ ಪ್ರಯಾಣದ ಕುರಿತು ಹೇಳಬಹುದಾ?**

ನಮ್ಮದು ಜಮೀನ್ದಾರಿ ಕುಟುಂಬ. ನಾನು ಹುಟ್ಟಿದ್ದು ದೊಡ್ಡ ಶ್ರೀಮಂತರ ಮನೆಯಲ್ಲಾದರೂ ನನಗೆ ಒಕ್ಕಲು ಕುಟುಂಬದ ಕೆಲಸಗಳು, ಅಲ್ಲಿನ ಸರಳ ಜೀವನಕ್ರಮಗಳ ಅನುಭವವಿತ್ತು. ನನ್ನ ಅಜ್ಜಿ... ಅಂದರೆ ನನ್ನ ತಾಯಿಯ ತಾಯಿಯವರು ಶ್ರೀರಂಗಪಟ್ಟಣದವರು. ಅಲ್ಲಿನ ಸುತ್ತಮುತ್ತಲ ಹಳ್ಳಿಗಳಲ್ಲಿ ನಮಗೆ ಬಹಳ ಜನ ನೆಂಟರಿಷ್ಟರು. ಹಾಗಾಗಿ ನನಗೆ ಹಳ್ಳಿಯ ಬದುಕಿನ ಒಡನಾಟ ಬಾಲ್ಯದಿಂದಲೂ ಇತ್ತು. ಚಿಕ್ಕಂದಿನಿಂದ ನಾನು ನನ್ನ ತಂದೆತಾಯಿ ಜೊತೆ ಬಾಂಬೆ, ಬೆಂಗಳೂರು, ಮೈಸೂರು ಅಂತ ಸಿಕ್ಕಾಪಟ್ಟೆ ಓಡಾಡುತ್ತಿದ್ದೆ. ಬೇರೆಬೇರೆ ರೀತಿಯ ಜನಗಳ ಪರಿಚಯ ಇದರಿಂದ ಆಯ್ತು. ನನ್ನ ತಂದೆ ಪುಟ್ಟಸ್ವಾಮಯ್ಯನವರು ಅಬಕಾರಿ ಕಂಟ್ರಾಕ್ಟರ್ ಆಗಿದ್ದರು. ಅವರು 'ಪ್ರಜಾವಾಣಿ'ಯ ಕೆ.ಎನ್. ಗುರುಸ್ವಾಮಿಯವರ ಸಮಕಾಲೀನರು. ಮೈಸೂರಿನ ವೆಸ್ಲಿ ಮಿಷನ್ ಹೈಸ್ಕೂಲಿನಲ್ಲಿ ನನ್ನ ತಂದೆ ಮತ್ತು ಕುವೆಂಪು ಸಹಪಾಠಿಯಾಗಿದ್ದವರು. ಇಬ್ಬರಿಗೂ ತುಂಬ ಪರಿಚಯ ಅಂತೇನೂ ಇರ್ಲಿಲ್ಲ, ಆದ್ರೂ ಅದೊಂದು ಪ್ರಭಾವ ಇರುತ್ತಲ್ಲ.

ತಂದೆಯವರ ಸ್ನೇಹವಲಯ ದೊಡ್ಡದಿತ್ತು. ನಮ್ಮ ಮನೆಗೆ ಎಲ್ಲ ಜಾತಿಯ, ಎಲ್ಲ ರೀತಿಯ ಜನಗಳು ಬರೋವ್ರು. ಮುಖ್ಯವಾಗಿ ಇದರಿಂದ ವರ್ಗಪ್ರಜ್ಞೆಯ ಭಿನ್ನತೆ ನನ್ನೊಳಗೆ ಬೆಳೀಲಿಲ್ಲ. ನಾನು ಒಂದೆರಡು ವರ್ಷದವಳಿದ್ದಾಗ ನಮ್ಮ ತಂದೆ ಹಾಸನದಲ್ಲಿ ಸಿನಿಮಾ ಥಿಯೇಟರ್ ಕಟ್ಟಿಸಿದರು. 'ಪಿಕ್ಚರ್ ಪ್ಯಾಲೇಸ್' ಅಂತ, ಅದು ಈಗಲೂ ಇದೆ. ಇದರಿಂದ ಬೇರೆಬೇರೆ ವರ್ಗದ ಜನರನ್ನು ನೋಡುತ್ತಿದ್ದೆ, ಬೇರೆ ಭಾಷೆ ಸಿನಿಮಾಗಳನ್ನು ನೋಡೋ ಹುಚ್ಚು ಅಂಟಿತು. ಇದೂ ಕೂಡ ಹಲವು ಅನುಭವಗಳನ್ನು ನನಗೆ ಕೊಟ್ಟಿದೆ. ಇನ್ನೊಂದು ಏನಾಯ್ತು ಅಂದ್ರೆ, ನಾನು ನಾಲ್ಕು ವರ್ಷದವಳಿದ್ದಾಗ ಹದಿನಾರು ವರ್ಷದ ನನ್ನ ಅಕ್ಕ ತೀರಿಕೊಂಡುಬಿಟ್ಟಳು. ನನ್ನ ತಾಯಿಗೆ ಇದು ತುಂಬಾ ಘಾಸಿ ಮಾಡಿತು. ಈ ಘಟನೆ ಆದ ಮೇಲೆ ನಮ್ಮಮ್ಮ ನನಗೆ ಸ್ವತಂತ್ರವಾಗಿ ಓಡಾಡೋಕೆ, ಬೆಳೆಯೋಕೆ ಅವಕಾಶ ಕೊಟ್ಟರು.

ನಮ್ಮ ಮನೆಯಲ್ಲಿ ಕಾಳಿ ಅಂತ ಒಬ್ಬ ಕೆಲಸದಾಕೆ ಇದ್ದಳು. ಇವಳ ಸೆರಗು ಹಿಡಕೊಂಡು ನಾನು ಬೆಸ್ತರ ಕೇರಿ, ಸಾಬರ ಕೇರಿ, ಮಾಂಸದಂಗಡಿ, ಚಾಕಣದ ಅಂಗಡಿ, ಪೇಟೆ ಬೀದಿಗೆ ಹೋಗ್ತಿದ್ದೆ. ಅವಳು ತನ್ನ ಗೆಳತಿಯರ ಮನೆಗೆ ಹೋದ್ರೆ ನಾನೂ ಅವಳ ಹಿಂದೆ ಹೋಗ್ತಾ ಇದ್ದೆ. ಅವಳಿಂದ ನನಗೆ ಎಲ್ಲ ಜಾತಿಯ, ಹಲವು ರೀತಿಯ ಜನರ ಪರಿಚಯವೂ ತಂತಾನೇ ಆಯ್ತು. ಇದೆಲ್ಲ ನಮ್ಮನಮ್ಮ ಜೀವಿತದ ಪುಣ್ಯ ಅಷ್ಟೆ... ಆದರೆ ನನ್ನ ಸಮವಯಸ್ಸಿನ ಹೆಣ್ಣುಮಕ್ಕಳಿಗೆ ಈ ತರದ ಸ್ವಾತಂತ್ರ್ಯ ಇರಲಿಲ್ಲ. ನಾನು ಹೇಳ್ತಾ ಇರೋದು 1945ರ ಆಸುಪಾಸಿನ ಕಾಲ. ನಾನು ಪ್ರೈಮರಿಯಲ್ಲಿ ಓದುತ್ತಿದ್ದ ಹೊತ್ತಿನಲ್ಲಿ, ನನಗಿಂತ ಸ್ವಲ್ಪ ದೊಡ್ಡವಳಾಗಿದ್ದ ರಾಜಿ ಅನ್ನುವ ಹುಡುಗಿ ಒಬ್ಬಳು ಒಂದೆರಡು ದಿನ ಶಾಲೆಗೆ ಚಕ್ಕರ್ ಹಾಕಿದಳು. ನಾವೆಲ್ಲ ಗೆಳತಿಯರು ಅವಳನ್ನು ಹುಡುಕಿಕೊಂಡು ಅವಳ ಮನೆಗೆ ಹೋದ್ವಿ. ಅವಳ ತಾಯಿ ನಮಗೆ ಚಿಗಳಿ ತಿನ್ನೋಕೆ ಕೊಟ್ಟು, 'ಅವ್ಳು ಋತುವಾಗವ್ಳೆ ಹೋಗಿ, ಇನ್ಮೇಕೆ ಸ್ಕೂಲಿಗೆ ಬರಾಕಿಲ' ಅಂದರು. ಆ ಕಾಲ ಹೇಗಿತ್ತು ಅನ್ನೋಕೆ ಇದನ್ನ ಹೇಳ್ತಿದೀನಿ... ಆದ್ರೆ ನನಗೆ ಇಂತಹ ಕಟ್ಟಳೆಗಳು ಇರಲಿಲ್ಲ.

ಶ್ರೀರಾಮ್ ಅವರನ್ನು ನಾನು ಇಷ್ಟಪಟ್ಟು ಮದುವೆಯಾದ ಮೇಲೆ ನನಗೆ ಅದು ಹೊಸ ರೀತಿಯ ಬದುಕು ಅಥವಾ ಕಷ್ಟ ಅಂತ ಅನ್ನಿಸಲಿಲ್ಲ. ಶ್ರೀರಾಮ್ ಅವರು ಕಾಲೇಜು ದಿನಗಳಿಂದಲೇ ಸಮಾಜವಾದಿ ಓದು, ವಿಚಾರಗಳಿಂದ ಪ್ರಭಾವಿತರಾಗಿದ್ದವರು. ಜೊತೆಗೆ ತೇಜಸ್ವಿಯವರ ಒಡನಾಟ ಇತ್ತು. ಸರಳವಾಗಿ ಬದುಕಬೇಕು ಅನ್ನೋದನ್ನ ನಾವಿಬ್ಬರೂ ಪರಸ್ಪರ ಅಳವಡಿಸಿಕೊಂಡೆವು. ಶ್ರೀರಾಮ್ ಅವರ ಪ್ರಭಾವದಿಂದಾಗಿಯೇ ನಾನು ಆ ಕಾಲದ ಹಲವಾರು ಸಾಹಿತ್ಯದ ಕಾರ್ಯಕ್ರಮಗಳಲ್ಲಿ, ಸಾರ್ವಜನಿಕ ಪ್ರತಿಭಟನೆಗಳಲ್ಲಿ ಭಾಗವಹಿಸ್ತಿದ್ದೆ. ಆಗೆಲ್ಲ ಹೆಣ್ಣುಮಕ್ಕಳು ಪ್ರತಿಭಟನೆ, ಮೆರವಣಿಗೆಯಲ್ಲಿ ಪಾಲ್ಗೊಳ್ಳುವ ಮನಸ್ಥಿತಿ ಬಹಳ ಇರಲಿಲ್ಲ. ನಾನು, ಮೀರಾ ನಾಯಕ ಮತ್ತು ಇನ್ನೊಬ್ರು... ಹೆಸರು ನೆನಪಾಗ್ತಾ ಇಲ್ಲ... ನಾವು